# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 14-4-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಅಕಾಲಿಕ ಮಳೆ ಪ್ರತಿಕೂಲ ಹವಾಮಾನದಿಂದ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆ ಸಾಧ್ಯತೆ

ಈ ಸೀಸನ್ ಆರಂಭದಿಂದಲೇ ಪ್ರತಿಕೂಲ ಹವಾಮಾನದಿಂದ ವಿಳಂಬಿತವಾಗಿ ಆರಂಭವಾದ ಕಚ್ಚಾ ಗೋಡಂಬಿ ಸೀಸನ್ ಅಕಾಲಿಕ ಮಳೆಯಿಂದ ಮುಂಚಿತ ಅಂತ್ಯವಾಗುವ ಸೂಚನೆ ಕಾಣುತ್ತಿದೆ. ಪ್ರತಿಕೂಲ ಹವಾಮಾನ ಹಾಗೂ ಅಕಾಲಿಕ ಮಳೆ ಉತ್ಪಾದನೆಯ ಮೇಲೆ ತೀವ್ರ ಪರಿಣಾಮ ಬೀರುವ ಸಾಧ್ಯತೆಯಿದ್ದು ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಗಣನೀಯ ಇಳಿಕೆಯಾಗುವ ಸಾಧ್ಯತೆಯಿದೆ.

## ಜೋಳ ಜಾಗತಿಕ ಬೇಡಿಕೆ ಹೆಚ್ಚಳ

ಜಾಗತಿಕವಾಗಿ ಜೋಳ ಬೇಡಿಕೆ ಇತ್ತೀಚಿನ ವರ್ಷಗಳಲ್ಲಿ ಗಣನೀಯ ಹೆಚ್ಚಳವಾಗುತ್ತಿದೆ. ವಿಶ್ವ ಆಹಾರ ಕೌನ್ಸಿಲ್ ಜೋಳದ ಜಾಗತಿಕ ಬೇಡಿಕೆ ವೇಗವಾಗಿ ಹೆಚ್ಚಳಗೊಂಡಿದೆಯೆಂದು ಹೇಳಿದೆ. ಮಾನವನ ಆರೋಗ್ಯಪರ ಕಾಳಜಿ, ಪಶು ಆಹಾರಗಳಲ್ಲಿ ಬಳಕೆ ಇತ್ಯಾದಿಗಳಿಂದ ಜಾಗತಿಕ ಜೋಳ ಬಳಕೆ ಹೆಚ್ಚಳವಾಗುತ್ತಿದೆ. ಇದರಿಂದ ಜೋಳ ದರವೂ ಹೆಚ್ಚಳವಾಗುತ್ತಿದೆ. ದೇಶೀ ಮಾರುಕಟ್ಟೆಯಲ್ಲಿ ಕರ್ನಾಟಕದಲ್ಲಿ ಜೋಳ ದರ ಹೆಚ್ಚಳವಾಗಿದ್ದು, ಒರಿಸ್ಸಾದಲ್ಲಿ ದರ ಸ್ಥಿರವಿದೆ. ಹೊಸ ಬೆಳೆಯ ಆವಕ ಹೆಚ್ಚಳವಾದಲ್ಲಿ ದರ ಸ್ವಲ್ಪ ಮಟ್ಟಿನ ಇಳಿಕೆ ಕಾಣುವ ಸಾಧ್ಯತೆಯಿದೆ.